ದಿನಾಂಕಃ 19.08.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**<u>ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ</u>**

ಸದರಿ ದಾವೆಯನ್ನು ಹೂಡಲು ನಾನೇ ನಮ್ಮ ವಕೀಲರಿಗೆ ಮಾಹಿತಿ ನೀಡಿರುತ್ತೇನೆ. ನಾನು ಹತ್ತನೇ ತರಗತಿಯವರೆಗೆ ವಿದ್ಯಾಭ್ಯಾಸ ಮಡಿರುತ್ತೇನೆ. ಆಶಾ ಕಾರ್ಯಕರ್ತೆಯಾಗಿ ನಾನು ಕೆಲಸ ಮಾಡುತಿದ್ದೇನೆ ಎಂದರೆ ಸರಿ. ನನ್ನ ಗಂಡನಿಗೆ ಇಬ್ಬರು ಹೆಂಡತಿಯರು ಎಂದರೆ ಸರಿ. ನಾನು ಜೋಗಯ್ಯನ ಪಾಳ್ಯ ಕುರುಬರಹಳ್ಳಿಯಲ್ಲಿ ಮನೆಯನ್ನು ಕಟ್ಟಿಕೊಂಡು ವಾಸವಿದ್ದೇನೆ ಎಂದರೆ ಸರಿ. ನನಗೆ ಕುರಬರಹಳ್ಳಿ ಕಾಂಟ್ರಾಕ್ಟರ್ ಚಂದ್ರಪ್ಪರವರ ಪರಿಚಯ ಇದೆ ಎಂದರೆ ಸರಿ. ನಾನು ಕಾಂಗ್ರೆಸ್ ಕಾರ್ಯಕರ್ತೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಮೂಲತಃ 1 ರಿಂದ 8 ನೇ ಪ್ರತಿವಾದಿಗಳ ಸ್ವತ್ತು ಎಂದರೆ ಸರಿ. ಪ್ರತಿವಾದಿಗಳು ಅವಿದ್ಯಾವಂತರು ಎಂದರೆ ಸರಿಯಲ್ಲ. ಅವರ ವಿದ್ಯಾಭ್ಯಾಸದ ಮಾಹಿತಿ ನನಗೆ ಗೊತ್ತಿಲ್ಲ. ಮೂರನೇ ಪ್ರತಿವಾದಿ ಬಿ ಜೆ ಪಿ ಯ ಕಾರ್ಯಕರ್ತೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಬಗ್ಗೆ ವ್ಯವಹಾರವನ್ನು ಚಂದ್ರಪ್ಪರವರು ಮಾಡಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ದಾವಾ ಸ್ವತ್ತಿನಲ್ಲಿ ಗುಡಿಸಿಲನ್ನು ಕಟ್ಟಿಕೊಂಡು ವಾಸವಿದ್ದಾರೆ ಎಂದರೆ ಸಾಕ್ಷಿಯು ನಾವು ಶೆಡ್ ಅನ್ನು ಹಾಕಿಕೊಂಡಿದ್ದೇವೆ ಎಂದು ನುಡಿದಿರುತ್ತಾರೆ. ನಾನು ಯಾವುದೇ ಶದ್‌ಅನ್ನು ಕಟ್ಟಿಕೊಂಡಿಲ್ಲ ಹಾಗೂ ಪ್ರತಿವಾದಿಗಳು ದಾವಾ ಸ್ವತ್ತಿನಲ್ಲಿ ವಾಸ ಇದ್ದರೆ ಎಂದರೆ ಸರಿಯಲ್ಲ.ದಾವಾ ಸ್ವತ್ತಿನಲ್ಲಿ ಶೆಡ್ ದಕ್ಷಿಣಾಭಿಮುಖವಾಗಿದೆ. ಅದು ಪೂರ್ವಾಭಿಮುಖವಾಗಿದೆ ಎಂದರೆ ಸರಿಯಲ್ಲ. ಮೂರನೇ ಪ್ರತಿವಾದಿಯು ಚಂದ್ರಪ್ಪರವರನ್ನು ಬೇಟಿ ಮಾಡಿ ಹಣವನ್ನು ಕೇಳಿದರು ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಗಳು 12.60 ಲಕ್ಷ ರೂಪಾಯಿಗಳಿಗೆ ದಾವಾ ಸ್ವತ್ತನ್ನು ಅಡಮಾನವಾಗಿ ನೀಡಲು ಚಂದ್ರಪ್ಪರವರನ್ನು ಕೇಳಿದರು ಎಂದರೆ ನನಗೆ ಗೊತ್ತಿಲ್ಲ. ಚಂದ್ರಪ್ಪರವರು ನನ್ನ ಮೂಲಕ ವ್ಯವಹಾರ ಮಾಡಲು ಒಪ್ಪಿ, ಅಡಮಾನ ಅಲ್ಲದೆ ಕ್ರಯ ಕರಾರು ಪತ್ರವನ್ನು ಮಾಡಿಕೊಡಲು ಕೇಳಿದರು ಎಂದರು ನನಗೆ ಗೊತ್ತಿಲ್ಲ. ನನಗೆ ಎಲ್ಲಾ ವಿಷಯಗಳು ಗೊತಿದ್ದರೂ ಸುಳ್ಳು ಸಾಕ್ಷಿಯನ್ನು ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ಚಂದ್ರಪ್ಪ ಪ್ರತಿವಾದಿಗಳಿಗೆ ಕ್ರಯದ ಕರಾರುವನ್ನು ಬರೆದುಕೊಟ್ಟರೆ ನಂತರ ಜಮೀನಿನನ್ನು ಬಿಟ್ಟುಕೊಡುವುದಾಗಿ ಹೇಳಿದ್ದೆವು ಎಂದರೆ ಸರಿಯಲ್ಲ. ಆಗ ಪ್ರತಿವಾದಿಗಳು ಕ್ರಯ ಕರಾರು ಬೇಡ ಎಂದು ಹೇಳಿದರು ಎಂದರೆ ಸರಿಯಲ್ಲ. ಆದರೂ ನಾವು ಒಪ್ಪದೇ ಕ್ರಯದ ಕರಾರು ಮಾಡಿಕೊಂಡಿಲ್ಲ ಎಂದರೆ ಹಣವನ್ನು ಕೊಡುವುದಿಲ್ಲ ಎಂದು ಹೇಳಿದೆವು ಎಂದರೆ ಸರಿಯಲ್ಲ. ನಂತರ ಪ್ರತಿವಾದಿಗಳು ನನ್ನ ಮತ್ತು ಚಂದ್ರಪ್ಪನವರಿಗೆ ಕರಾರು ಪತ್ರವನ್ನು ಬರೆದುಕೊಟ್ಟರು ಎಂದರೆ ಸಾಕ್ಷಿಯು ಕೇವಲ ನನ್ನ ಹೆಸರಿಗೆ ಮಾತ್ರ ಬರೆದಿರುತ್ತಾರೆ ಎಂದು ನುಡಿದಿರುತ್ತಾರೆ. ದಿಃ23.01.2017 ರಂದು ಪ್ರತಿವಾದಿಗಳು ನನಗೆ ಕರಾರು ಪತ್ರವನ್ನು ಬರೆದುಕೊಟ್ಟು ಎಂದರೆ ಸರಿ. ಸದರಿ ದಿನದಂದು ನಾನು ಮೂರು ಲಕ್ಷ ರೂ. ಗಳನ್ನು ಮಾತ್ರ ನೀಡಿದೆ ಎಂದರೆ ಸಾಕ್ಷಿಯು ಮುಂದುವರೆದು ಉಳಿದ ಹಣವನ್ನು ಕ್ರಯದ ದಿನ ನೀಡಿರುತ್ತೇನೆ ಎಂದು ನುಡಿದಿರುತ್ತಾರೆ. ನಾನು ಮತ್ತು

ಚಂದ್ರಪ್ಪ ಉಳಿದ ಹಣವನ್ನು ನೀಡಿಲು ಸಮಯಾಕಾಶವನ್ನು ಕೇಳಿದೆವು ಎಂದರೆ ಸರಿ. ಪ್ರತಿವಾದಿಗಳು ಕರಾರು ಆದನಂತರ ಉಳಿದ ಹಣವನ್ನು ಕೊಡಿ ಎಂದು ಕೇಳಿದರು ಎಂದರೆ ಸರಿ. ನನ್ನನ್ನು ಮತ್ತು ಚಂದ್ರಪ್ಪರವರನ್ನು ಪ್ರತಿವಾದಿಗಳು ಹಣ ಕೇಳಿದರು ಎಂದರೆ ಸಾಕ್ಷಿಯು ನನ್ನನ್ನು ಕೇಳಿದರು ಚಂದ್ರಪ್ಪರವರ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಆಗ ನಾನು ಮತ್ತು ಚಂದ್ರಪ್ಪ ಕ್ರಯ ಪತ್ರ ಬರೆದುಕೊಟ್ಟರೆ ಹಣವನ್ನು ನೀಡುವುದಾಗಿ ಹೇಳಿದರು ಎಂದರೆ ಸಾಕ್ಷಿಯು ನಾನು ಮಾತ್ರ ಹಾಗೆ ನುಡಿದಿರುತ್ತೇನೆ ಎಂದು ಹೇಳಿರುತ್ತಾರೆ. ಆಸ್ತಿ ಬೆಲೆ ಜಾಸ್ತಿ ಇದೆ ಆದ ಕಾರಣ ನಾವು ಕ್ರಯಪತ್ರ ಬರೆದುಕೊಟ್ಟರೆ ಮಾತ್ರ ಹಣವನ್ನು ನೀಡುವುದಾಗಿ ಹೇಳಿದೆವು ಎಂದರೆ ಸಾಕ್ಷಿಯು ನಾನು ಕ್ರಯಪತ್ರವನ್ನು ಮಾಡಿಕೊಡುವ ಸಂದರ್ಭದಲ್ಲಿ ಉಳಿದ ಹಣ ನೀಡುವುದಾಗಿ ಹೇಳಿರುತ್ತೇನೆ ಎಂದು ನುಡಿದಿರುತ್ತಾರೆ. ನಾನೂ ಹಾಗೂ ಚಂದ್ರಪ್ಪರವರು ನಾಮಕವಸ್ತೆ ಕ್ರಯ ಪತ್ರವನ್ನು ಬರೆದುಕೊಟ್ಟರೆ ನಾವು ಎದರುವಳಿ ಕರಾರುಪತ್ರವನ್ನು ಬರೆದುಕೊಡುತ್ತೇವೆ ಎಂದು ಹೇಳಿದೆವು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನೇನೂ ಬರೆದುಕೊಟ್ಟಿಲ್ಲ ಎಂದು ನುಡಿದಿರುತ್ತಾರೆ. ಆಗ ನಾವು ಪ್ರತಿವಾದಿಯವರಿಗೆ ಸ್ವಾ ಧೀನ ನಿಮ್ಮ ಬಳಿಯೇ ಇರಲಿ ಎಂದು ಹೇಳಿದೆವು ಎಂದರೆ ಸರಿಯಲ್ಲ. ಕ್ರಯಪತ್ರವನ್ನು ಬರೆದು ಕೊಟ್ಟರೆ ನಾವು ಯಾವುದೇ ದಾಖಲೆಗಳನ್ನು ಬದಲಾಯಿಸಿಕೊಳ್ಳುವುದಿಲ್ಲ ಎಂದು ಪ್ರತಿವಾದಿಗಳಿಗೆ ಬರವಸೆಯನ್ನು ನೀಡಿದೆವು ಎಂದರೆ ಸರಿಯಲ್ಲ. ಪ್ರತಿವಾದಿಗಳು ನನ್ನ ಹಾಗೂ ಚಂದ್ರಪ್ಪನ ಮೇಲೆ ನಂಬಿಕೆ ಇಟ್ಟು ಪ್ರತಿವಾದಿರವರು ದಿಃ03.03.2018 ರಂದು ಕ್ರಯ ಪತ್ರವನ್ನು ನಾಮಕವಸ್ತೆಯಾಗಿ ಬರೆದುಕೊಟ್ಟರು ಎಂದರೆ ಸಾಕ್ಷಿಯು ಶುದ್ದ ಕ್ರಯಪತ್ರವನ್ನೇ ಬರೆದು ಕೊಟ್ಟರು ನಾಮಕವಾಸ್ತೆಯಾಗಿ ಅಲ್ಲ ಎಂದು ನುಡಿದಿರುತ್ತಾರೆ. ಅದೇ ದಿನ ನಾನು ಎದುರುವಳಿ ಕರಾರುಪತ್ರವನ್ನು ಬರೆದುಕೊಟ್ಟೆನು ಎಂದರೆ ಸರಿಯಲ್ಲ. ಆ ದಿನದಿಂದ 20 ತಿಂಗಳ ಒಳಗಾಗಿ ಪ್ರತಿವಾದಿಗಳು 18,53,600 ರೂ. ಗಳನ್ನು ಹಿಂದಿರುಗಿಸಿದರೆ ಆಸ್ತಿಯನ್ನು ವಾಪಸ್ ನೀಡುವುದಾಗಿ ನಮ್ಮ ಮತ್ತು ಪ್ರತಿವಾದಿಗಳ ವಧ್ಯ ಒಪ್ಪಂದ ಆಯಿತು ಎಂದರೆ ಸರಿಯಲ್ಲ.

(ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಪ್ರಕರಣವನ್ನು ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/-

ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,

ಶಿರಾ.